ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (326) 272

ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಕಂದಾಯ ಸಚಿವರು

ಉತ್ತರಿಸಬೇಕಾದ ದಿನಾಂಕ : 17.07.2019

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಲ್ಲಿ ಮನೆ ಕಳೆದುಕೊಂಡು ನಿರಾಶ್ರಿತರಾದವರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)	ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಲ್ಲಿ ಮನೆ ಕಳೆದುಕೊಂಡು ನಿರಾಶ್ರಿತರಾದವರ ವಿವರ ಅನುಬಂಧ 1 ರಲ್ಲಿ ನೀಡಿದೆ.
ಆ	ಸದರಿ ನಿರಾಶ್ರಿತರಾದವರಿಗೆ ಸರ್ಕಾರದಿಂದ ದೊರೆತಿರುವ ಪರಿಹಾರ, ಸಹಾಯಗಳೇನು; (ಸಂಪೂರ್ಣ ವಿವರ ನೀಡುವುದು)	ಸದರಿ ನಿರಾಶ್ರಿತರಾದವರಿಗೆ ಪ್ರಕೃತಿ ವಿಕೋಪ ಮಾರ್ಗಸೂಚಿಯಂತೆ 4254 ವಾಸದ ಮನೆ ಹಾನಿಗೊಂಡ ಪ್ರಕರಣಗಳಲ್ಲಿ ರೂ.1508.74 ಲಕ್ಷ ಪರಿಹಾರ ಪಾವತಿಸಲಾಗಿದೆ. ನೆರೆಹಾವಳಿಯಿಂದ ಮನೆ ಹಾನಿಯಾದ ಬಾಧಿತ ಕುಟುಂಬಗಳು ಗೃಹೋಪಯೋಗಿ ಸಲಕರಣೆಗಳನ್ನು (Utensils and Clothing) ಖರೀದಿಸಲು ತಲಾ ರೂ.50,000/- ದಂತೆ ಪಾವತಿಸಲಾಗಿದೆ. ಮುಂದುವರೆದು ಮನೆ ಕಳೆದುಕೊಂಡು ನಿರಾಶ್ರಿತರಾದವರಿಗೆ ಸರ್ಕಾರದ ವತಿಯಿಂದ ತಲಾ ರೂ.9.85 ಲಕ್ಷ ಮೊತ್ತದಂತೆ ಸರ್ಕಾರದ ಜಾಗದಲ್ಲಿ 753 ವಾಸದ ಮನೆ ನಿರ್ಮಾಣ ಮಾಡಲು ಹಾಗೂ ಸಂತ್ರಸ್ಥರ ಸ್ವಂತ ಜಾಗದಲ್ಲಿ ಮನೆ ನಿರ್ಮಿಸಿಕೊಳ್ಳಲು ಇಚ್ಛಿಸಿರುವ 83 ನಿರಾಶ್ರಿತರಿಗೆ ತಲಾ ರೂ.9.85 ಲಕ್ಷದಂತೆ ಒಟ್ಟು ರೂ.817.55 ಲಕ್ಷ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ. ಈ ಪೈಕಿ ದಾಖಲೆಗಳನ್ನು ನೀಡಿರುವ 54 ಸಂತ್ರಸ್ಥರುಗಳಿಗೆ ಅವರ ಸ್ವಂತ ಜಾಗದಲ್ಲಿ ಮನೆ ನಿರ್ಮಿಸಿಕೊಳ್ಳಲು ಮೊದಲನೇ ಕಂತಾಗಿ ತಲಾ ರೂ.2.00 ಲಕ್ಷದಂತೆ ಒಟ್ಟು ರೂ.108.00 ಲಕ್ಷ ಮೊತ್ತವನ್ನು ಸಂಬಂಧಿಸಿದ ಸಂತ್ರಸ್ಥರುಗಳ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗಿರುತ್ತದೆ. ಉಳಿದ 29 ಸಂತ್ರಸ್ಥರುಗಳ ಅರ್ಜಿಗಳು ಪರಿಶೀಲನಾ ಹಂತದಲ್ಲಿರುತ್ತದೆ. ನಿರಾಶ್ರಿತರಾದ 840 ಕುಟುಂಬಗಳಿಗೆ ಬಾಡಿಗೆ ಮನೆಯಲ್ಲಿ ವಾಸ ಮಾಡಲು ಪ್ರತೀ ತಿಂಗಳು ರೂ.10,000 ಗಳನ್ನು ಪಾವತಿಸಗುತ್ತಿದೆ.

ಇ	ಈ ನಿರಾಶ್ರಿತರಲ್ಲಿ ಸರ್ಕಾರದಿಂದ ನಿರ್ಮಿಸಿಕೊಡುವ ಮನೆಗಳನ್ನು ಕೋರಿರುವವರ ಸಂಖ್ಯೆ ಎಷ್ಟು; ಹಾಗೂ ಬೇರೆ ರೀತಿಯ ಪರಿಹಾರ ಕ್ರಮಗಳನ್ನು ಬಯಸಿರುವವರ ಸಂಖ್ಯೆ ಎಷ್ಟು;	ಈ ನಿರಾಶ್ರಿತರಲ್ಲಿ 753 ನಿರಾಶ್ರಿತರು ಸರ್ಕಾರದಿಂದ ಮನೆ ನಿರ್ಮಿಸಿಕೊಡಲು ಹಾಗೂ 83 ಸಂತ್ರಸ್ಥರುಗಳು ಅವರ ಸ್ವಂತ ಜಾಗದಲ್ಲಿ ಮನೆ ನಿರ್ಮಿಸಿಕೊಳ್ಳಲು ಅನುದಾನ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.
ಈ	ಎಷ್ಟು ನಿರಾಶ್ರಿತರಿಗೆ ಮನೆ ಹಸ್ತಾಂತರಿಸಲಾಗಿದೆ; ಎಷ್ಟು ನಿರಾಶ್ರಿತರಿಗೆ ಬೇರೆ ರೀತಿಯ ಪರಿಹಾರ ವ್ಯವಸ್ಥೆ ಕಲ್ಪಿಸಲಾಗಿದೆ?	ನಿರಾಶ್ರಿತರಿಗೆ ನಿರ್ಮಿಸುತ್ತಿರುವ ಮನೆಗಳ ಕಾಮಗಾರಿಗಳು ಪ್ರಸ್ತುತ ಹಂತದ ವಿವರ ಅನುಬಂಧ 2 ರಲ್ಲಿ ನೀಡಿದೆ. ಸ್ವಂತ ಜಾಗದಲ್ಲಿ ಮನೆ ನಿರ್ಮಿಸಿಕೊಳ್ಳಲು ಇಚ್ಛಿಸಿರುವ 83 ಸಂತ್ರಸ್ಥರಿಗೆ ತಲಾ ರೂ.9.85 ಲಕ್ಷದಂತೆ ಒಟ್ಟು ರೂ.817.55 ಲಕ್ಷ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ.

ಕಂಇ 44 ಟಿಎನ್‌ಆರ್ 2019

(ಆರ್.ವಿ. ದೇಶಪಾಂಡೆ)
ಕಂದಾಯ ಸಚಿವರು

ಅನುಬಂಧ - 1

ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಲ್ಲಿ ಮನೆ ಕಳೆದುಕೊಂಡು ನಿರಾಶ್ರಿತರಾದವರ ವಿವರ

ಕ್ರ ಸಂ.	ತಾಲ್ಲೂಕು/ವ್ಯಾಪ್ತಿ	ನಿರಾಶ್ರಿತರಾದವರ ಸಂಖ್ಯೆ
1	ಮಡಿಕೇರಿ ತಾಲ್ಲೂಕು	457
2	ಮಡಿಕೇರಿ ನಗರಸಭೆ	202
3	ಸೋಮವಾರಪೇಟೆ ತಾಲ್ಲೂಕು	153
4	ಪಟ್ಟಣ ಪಂಚಾಯಿತಿ, ಕುಶಾಲನಗರ	14
5	ವಿರಾಜಪೇಟೆ ತಾಲ್ಲೂಕು	10
	ಒಟ್ಟು	836

ಅನುಬಂಧ - 2

ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರದ ವತಿಯಿಂದ ನಿರ್ಮಿಸಲಾಗುತ್ತಿರುವ ಮನೆಗಳ ಕಾಮಗಾರಿ ವಿವರ

KARNATAKA STATE HABITAT CENTRE PROGRESS REPORT

PROJECT:CONSTRUCTION OF GROUP HOUSE AT KODAGU DISTRICT

Sl. No	Location	No. Houses	No. Houses site clearance	Foundation	Houses Shell	95% completion	100% completion	Schedule of completion
1	Made	175	80	0	45	35	-	30.07.2019
2	Karnan geri	40	35	0	0	35	-	30.07.2019
3	Madapura	400	318	153	165	-	-	30.07.2019
4	Belegere	30	ಕಾಮಗಾರಿ ಇನ್ನಷ್ಟೇ ಪ್ರಾರಂಭಿಸಬೇಕಿದೆ					
5	Galibedu	125						
	TOTAL	**770**	**433**	**153**	**210**	**70**	-	-